3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

ಸಿ.ಸಿ.ನಂ. **2207 /2023**

ದಿನಾಂಕಃ **17.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ನಾಗರಾಜ್ | ಚಾಸಾ-8, ಪ್ರಾಸ.-8 |
| ತಂದೆಯ ಹೆಸರುಃ | ಗೋವಿಂದಪ್ಪ | |
| ವಯಸ್ಸು ಃ | 43 ವರ್ಷ | |
| ಉದ್ಯೋಗ ಃ | ಕೂಲಿ ಕೆಲಸ | |
| ವಾಸ ಃ | ಕೆ ದಾಸರಹಳ್ಳಿ | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ಚಾಸಾ-1 ಮತ್ತು 9 ನನಗೆ ಗೊತ್ತು. ಸುಮಾರು 2022 ನೇ ಸಾಲಿನಲ್ಲಿ ಆರೋಪಿತರು ಮತ್ತು ಚಾಸಾ-2, 3 ರವರ ನಡುವೆ ಕೆ ದಾಸರಹಳ್ಳಿಯಲ್ಲಿ ಗಲಾಟೆ ಆಗಿದ್ದು ಸದರಿ ಗಲಾಟೆಗೆ ಸಂಬಂಧಿಸಿದಂತೆ ಮಹಜರ್ ಕ್ರಮ ಜರುಗಿಸಲು ನಾನು, ಚಾಸಾ-1 ಮತ್ತು 9 ಹೋಗಿದ್ದು, ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಸಂಜೆ 4.00 ರಿಂದ 5.00 ಗಂಟೆ ಸಮಯದಲ್ಲಿ ಮಹಜರ್ ಜರುಗಿಸಿರುತ್ತಾರೆ. ಅದೇ ಸಮಯದಲ್ಲಿ ಛಾಯಾಚಿತ್ರ ತೆಗೆದಿರುತ್ತಾರೆ. ಮಹಜರ್ ಗೆ ನಾವುಗಳು ಸಹಿ ಮಾಡಿರುತ್ತೇವೆ. ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆಯಲಾದ ನಿಪಿ-3 ರ ಛಾಯಾಚಿತ್ರವನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ದಿಃ 21.12.2022 ರ ಪೋಲಿಸ್ ನೋಟಿಸನ್ನು ತೋರಿಸಲಾಗಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-8 ಎಂದು, ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)

ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ

ಆರೋಪಿತರು ಮತ್ತು ಚಾಸಾ-2, 3 ರವರ ನಡುವೆ ಗಲಾಟೆಯಾದ ಸಂಬಂಧ ದಿಃ21.12.2022 ರಂದು ನನಗೆ ಮತ್ತು ಚಾಸಾ-9 ರವರಿಗೆ ಪೋಲಿಸರು ನೋಟಿಸು ಜಾರಿ ಮಾಡಿ ಮಹಜರ್ ಗೆ ಸಹಕರಿಸುವಂತೆ ಕೋರಿರುತ್ತಾರೆ ಎಂದರೆ ಸರಿ. ಮಹಜರನ್ನು ಸಂಜೆ 4.30 ರಿಂದ 5.30 ರ ಸಮಯದಲ್ಲಿ ಮಾಡಿರುತ್ತಾರೆ ಎಂದರೆ ಸರಿ.

ಪಾಟೀಸವಾಲುಃ ಶ್ರೀ ಎಲ್ ಇ ಆರೋಪಿ ಪರ ವಕೀಲರಿಂದಃ

ಮಹಜರನ್ನು ಗಲಾಟೆಯಾದ ದಿನವೇ ಮಾಡಿರುತ್ತಾರೆ. ಗಲಾಟೆಯಾದ ಸುಮಾರು 2-3 ಗಂಟೆಗಳ ನಂತರ ಮಹಜರನ್ನು ಮಾಡಿರುತ್ತಾರೆ. ಮಹಜರ್ ದಿನ ಪೋಲಿಸರು ನನಗೆ ಯಾವುದೇ ನೋಟಿಸು ನೀಡಿರುವುದಿಲ್ಲ. ನನಗೆ ನ್ಯಾಯಾಲಯದಿಂದ ಬಂದ ಸಮನ್ಸ ನೀಡಿರುವುದನ್ನು ಪೋಲಿಸರು ನೋಟಿಸು

ನೀಡಿರುವುದಾಗಿ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ಘಟನೆ ಯಾವ ದಿನ ನಡೆದಿರುತ್ತದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ಯಾವ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಯಾವ ದಿನಾಂಕದಂದು ಸಹಿ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಘಟನೆ ವಿಚಾರವಾಗಿ ಪೋಲಿಸ್ ಠಾಣೆಗೆ ನನ್ನನ್ನು ಯಾವತ್ತೂ ಪೋಲಿಸ್ ಠಾಣೆಗೆ ಕರೆಯಿಸಿರುವುದಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ನಾನು ಓದಿ ನೋಡಿರುವುದಿಲ್ಲ. ಮಹಜರ್ ನಲ್ಲಿ ಬರೆದಿರುವ ವಿಚಾರಗಳನ್ನು ಪೋಲಿಸರು ಓದಿ ಹೇಳಿರುವುದಿಲ್ಲ. ಘಟನಾ ಸ್ಥಳದ ಪೂರ್ವಕ್ಕೆ ಃ ರಸ್ತೆ, ಪಶ್ಚಿಮಕ್ಕೆ ಃ ದೇವಸ್ಥಾನ ಉತ್ತರಕ್ಕೆ ಃ ಮನೆ. ನಾನು ಹೇಳಿರುವಂತೆ ಚಕ್ಕುಬಂಧಿಯು ಮಹಜರ್ ನಲ್ಲಿ ನಮೂದು ಇಲ್ಲ ಎಂದರೆ ನನಗೆ ಗೊತ್ತಿಲ್ಲ. ಗಲಾಟೆಯಾದ ದಿನವೇ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನಿಪಿ-2 ರ ಮಹಜರ್ ನಲ್ಲಿ ದಿಃ 21.12.2022 ರಂದು ಸಹಿ ಮಾಡಿರುತ್ತೇನೆ ಎಂದು ನಮೂದು ಇದೆ ಎಂದರೆ ಸರಿ. ಗಲಾಟೆಯು ದಿಃ 17.12.2022 ರಂದು ನಡೆದಿದೆ ಎಂದು ಬರೆದಿದೆ ಎಂದರೆ ಸರಿ. ಪೋಲಿಸರು ಬಂದು ಸಹಿ ಪಡೆದು ಛಾಯಾಚಿತ್ರ ತೆಗೆದಿರುವುದನ್ನು ಹೊರತುಪಡಿಸಿ ಬೇರೆ ವಿಚಾರ ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಕಚ್ಚಾ ನಕ್ಷೆ ತಯಾರಿಸಿರುವುದಿಲ್ಲ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.